# ಸರ್ವೋದಯ ಆಂಗ್ಲ ಪ್ರೌಢಶಾಲೆ

**ಕೆ.ಎಚ್.ಬಿ ಕಾಲೋನಿ–ಕುಣಿಗಲ್** **ಅಂಕಗಳು :೧೦೦**

**ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್–2019** **ಸಮಯ: ೩ಗಂಟೆಗಳು**

**ತರಗತಿ : ೧೦** **ವಿಷಯ : ಪ್ರಥಮ ಭಾಷೆ ಕನ್ನಡ**

---

**ಸೂಚನೆಗಳು:** *ಪ್ರಶ್ನೆಗಳ ಸಂಖ್ಯೆಯನ್ನು ಅನುಕ್ರಮವಾಗಿಯೇ ನಮೂದಿಸಿರಬೇಕು.
*ಪ್ರಶ್ನೆಯನ್ನು ಚೆನ್ನಾಗಿ ಓದಿ ಅರ್ಥೈಸಿಕೊಂಡು ಉತ್ತರಿಸಬೇಕು.
*ಉತ್ತರವನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಬರೆಯಬೇಕು.

**ಅ) ಈ ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದುದನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **6x1=6**

೧. ಈ ಕೆಳಗಿನ ಪದಗಳಲ್ಲಿ ಜಸ್ತ್ವ ಸಂಧಿಗೆ ಉದಾಹರಣೆಯಾದ ಪದ
ಎ)ಜನೈಕ್ಯ ಬಿ)ಉನ್ಮಾದ ಸಿ)ದೇವೇಂದ್ರ ಡಿ)ಚಿದಾನಂದ

೨.ಯಾವುದೇ ಭಾಷೆಯಲ್ಲಿ ಅನ್ಯದೇಶಿಯ ಅಥವಾ ವಿದೇಶಿಯ ಪದಗಳನ್ನು ಬಳಸುವಾಗ ಈ ಲೇಖನ ಚಿನ್ಹೆಯನ್ನು ಬಳಸುತ್ತೆವೆ
ಎ)ವಾಕ್ಯವೇಷ್ಠನ ಚಿಹ್ನೆ ಬಿ)ಭಾವಸೂಚಕ ಚಿಹ್ನೆ ಸಿ)ಅಲ್ಪವಿರಾಮ ಚಿಹ್ನೆ ಡಿ)ಆವರಣ ಚಿಹ್ನೆ

೩.ಕಾರವಾರದಲ್ಲಿ ಹೆಚ್ಚಿನ ಮಳೆಯ ಕಾರಣದಿಂದ ಮಲೇರಿಯಾ ಹಬ್ಬಿತ್ತು.ಅದ್ದರಿಂದ ವೀರೇಶ್ವರ ಪಾಠಕ್ ರವರು ಜ್ವರದಿಂದ ಬಳಲಬೇಕಾಯಿತು.ಈ ವಾಕ್ಯವು ಯಾವ ವಾಕ್ಯ ಪ್ರಕಾರಕ್ಕೆ ಸೇರಿದೆ
ಎ) ಸರಳ ವಾಕ್ಯ ಬಿ)ಸಂಯೋಜಿತ ವಾಕ್ಯ ಸಿ)ಮಿಶ್ರ ವಾಕ್ಯ ಡಿ)ಸಾಮಾನ್ಯ ವಾಕ್ಯ

೪.ವ್ಯಾಪಾರಿಯು ನಷ್ಟ ಅನುಭವಿಸಿ ನಗರದಿಂದ ಹಳ್ಳಿಗೆ ವಲಸೆ ಹೋದನು.ಈ ವಾಕ್ಯದಲ್ಲಿ ಅನ್ವರ್ಥನಾಮಪದ
ಎ)ವ್ಯಾಪಾರಿ ಬಿ)ನಗರ ಸಿ)ಹಳ್ಳಿ ಡಿ)ವಲಸೆ

೫.ಕಟ್ಟು ಪದದ ಸಂಭಾವನಾರ್ಥಕ ರೂಪ___
ಎ)ಕಟ್ಟಲಿ ಬಿ)ಕಟ್ಟುವನು ಸಿ)ಕಟ್ಟಿಯಾನು ಡಿ)ಕಟ್ಟನು

೬.ಮಕ್ಕಳು ತರಗತಿಯಲ್ಲಿ ಪಾಠವನ್ನು ಓದುತ್ತಿದ್ದಾರೆ.ಈ ವಾಕ್ಯವು ಯಾವ ಕಾಲದಲ್ಲಿದೆ
ಎ)ಭೂತಕಾಲ ಬಿ)ವರ್ತಮಾನಕಾಲ ಬಿ)ಭವಿಷ್ಯತ್ ಕಾಲ ಡಿ)ಗುಳಿಕ ಕಾಲ

**ಆ) ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂದಿ ಪದವನ್ನು ಬರೆಯಿರಿ** **4x1=4**

೭.ಸತಿಪತಿ : ಜೋಡುನುಡಿ :: ಕಟ್ಟುಕಡೆಗೆ :______
೮.ಭೀಮನಿಂದಂ : ಕರಣಾರ್ಥ :: ಭೀಮನೊಳ್ : ______
೯.ಸಾಮಂತ : ಸಾವಂತ :: ವಂಶ :______
೧೦.ಗಡಣ : ಗುಂಪು :: ದ್ರುಗುಜಲ :_______

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

೧೧.ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
೧೨.ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
೧೩.ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
೧೪.ಹಕ್ಕಿಯ ಚುಂಚಗಳು ಎಲ್ಲಿಯವರೆಗೆ ಚಾಚಿವೆ?
೧೫.ಹಲಗಲಿಯ ಗುರುತು ಉಳಿಯದಂತಾದುದು ಏಕೆ?
೧೬.ನಾರಣಪ್ಪನಿಗೆ ಕುಮಾರವ್ಯಾಸನೆಂಬ ಬಿರುದು ಬರಲು ಕಾರಣವೇನು?
೧೭.ಯಾರಿಗೆ ವಸಂತ ಮುಖ ತೋರಲಿಲ್ಲ?
೧೮.ಯಾವ ಎಚ್ಚರದೊಳು ಬದುಕಬೇಕಿದೆ?

Use E-Papers, Save Trees
Above line hide when print out

**ಈ) ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **10x2=20**

೧೯.ವಿವೇಕಾನಂದರು ಕೋಮುವಾದದ ಕಟ್ಟ ವಿರೋಧಿಯಾಗಿದ್ದರು.ಏಕೆ?
೨೦.ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?
೨೧.ಆತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ ಏನು ಹೇಳಿದರು?
೨೨.ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾದಿಗಳಿವೆ?
೨೩.ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
೨೪.ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕಿದೆ?
೨೫.ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
೨೬.ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?
೨೭.ಹೊಸಗಾಲದ ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
೨೮.ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?

**ಉ) ಈ ಕೆಳಗಿನ ಕವಿ ಅಥವಾ ಲೇಖಕರ ಸ್ಥಳ,ಕಾಲ,ಕೃತಿ,ಬಿರುದು ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **3x2=6**

೨೯.ವಿ.ಕೃ ಗೋಕಾಕ್ ೩೦.ಕುಮಾರವ್ಯಾಸ

**ಊ) ಈ ಕೆಳಗಿನ ವಾಕ್ಯವೃಂದಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ತಿಳಿಸಿ.** **3x1=3**

೩೧.ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ।
ನೊರ್ವನೇ ವೀರನಾತನ ಯಜ್ಞತುರಗಮಿದು।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ॥

**ಋ) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ.ಲಕ್ಷಣದೊಂದಿಗೆ ಸಮನ್ವಯಿಸಿ.** **3x1=3**

೩೨. "ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿನ ಸಿಡಿಲು ಸಿಡಿದ್ಹಾಂಗ"

**ಎ) ಈ ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ.** **3x1=3**

೩೩.ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ***ಅಥವಾ*** ಅಳಾಗಬಲ್ಲವನು ಅರಸನಾಗಬಲ್ಲ

**ಏ) ಈ ಕೆಳಗಿನ ವಾಕ್ಯಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.** **6x3=18**

೩೪."ಮಂಗಳ ಲೋಕದ ಅಂಗಳಕೇರಿ"
೩೫."ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"
೩೬."ಯುದ್ಧಕ್ಕೆ ಹೋದ ನನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲಾ"
೩೭."ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"
೩೮."ತಾಯಿ,ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ!?
೩೯."ಹೊಸ ಭರವಸೆಗಳ ಕಟ್ಟೋಣ"

**ಐ) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ** **1x4=4**

| | | |
|---|---|---|
| ೪೦.ಯುಗ-ಯುಗಗಳ________ | | ಕೊರಳಸೆರೆ________________ |
| ____________________ | ***ಅಥವಾ*** | ______________________ |
| ____________________ | | ______________________ |
| ____________-ನೋಡಿದಿರಾ?. | | ________________ ಚಿಂತಿಸಿದ. |

**ಒ) ಈ ಕೆಳಗಿನ ಪದ್ಯಭಾಗವನ್ನು ಒದಿಕೊಂಡು ಅದರಲ್ಲಿ ಅಡಕವಾಗಿರುವ ಸಾರಾಂಶವನ್ನು ಬರೆಯಿರಿ** **1x4=4**

೪೧.ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

Use E-Papers, Save Trees
Above line hide when print out

**ಓ)ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4x2=8**

೪೨.ಹಲಗಲಿ ದಂಗೆಗೆ ಕಾರಣವೇನು?ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

***ಅಥವಾ***

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ವಿವರಿಸಿ.

೪೩.ರಾಹಿಲನು ಮುದುಕಿಯ ಕುಟುಂಬಕ್ಕೂ,ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಕುರಿತು ನಿಮ್ಮ

ಮಾತುಗಳಲ್ಲಿ ಬರೆಯಿರಿ.

***ಅಥವಾ***

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ವಿವರಿಸಿ.

**ಔ) ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **2x2=4**

೪೪.ಹನ್ನೆರಡನೆಯ ಶತಮಾನದ ವಚನ ಆಂದೋಲನವು ಕರ್ನಾಟಕದಲ್ಲಿ ಸಾಕಷ್ಟು ಮಹತ್ತ್ವವನ್ನು ಪಡೆದುಕೊಂಡಿದೆ. ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲವೇನೋ ಈ ವಚನ ಧರ್ಮವನ್ನು ಜಾಂತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದೇನೋ.ಇದು ಜಾತಿಯಾದರೆ ಕೆಟ್ಟ ಜಾತಿ ಧರ್ಮವಾದರೆ ಮಹೋನ್ನತ ಧರ್ಮ.ಇಷ್ಟಾದ ಮೇಲೆ ವ್ಯಾಸ ಕ್ರಿಸ್ತಪೂರ್ವನೋ ನನಗೆ ತಿಳಿಯದು.ಅವನು ಎಲ್ಲಾ ಶತಮಾನಗಳ ಜೋತೆ ಬೆಳೆಯುತ್ತಲೇ ಇರುವವನು. ಟಾಲ್ ಸ್ಟಾಯ್,ಶೇಕ್ಸ್ ಪಿಯರ್ ಹಾಗೂ ನಮ್ಮ ನೆಲದ ಪಂಪ,ಕುಮಾರವ್ಯಾಸ,ಕವಿ ಬೇಂದ್ರೆಯವರೊಂದಿಷ್ಟು ಕವಿತೆ,ಕುವೆಂಪುರವರ ಮಲೆಗಳಲ್ಲಿ ಮದುಮಗಳು ಪುಣ್ಯದಂತೆ ಕಾಣಿಸುತ್ತವೆ.

ಅ)ಹನ್ನೆರಡನೇಯ ಶತಮಾನದ ವೈಶಿಷ್ಟ್ಯವೇನು?

ಆ)ಲೇಖಕರ ಪ್ರಕಾರ ಹನ್ನೆರಡನೇಯ ಶತಮಾನದ ನಂತರ ಬಂದ ಸಾಹಿತಿಗಳು ಯಾರು ಯಾರು?

**ಅಂ)ಕೆಳಗಿನ ಯಾವುದಾದರೂ ಒಂದಕ್ಕೆ ಮಾಹಿತಿಯನ್ನು ಆದರಿಸಿ ಪತ್ರ ಬರೆಯಿರಿ** **1x4=4**

೪೫. ನಿಮ್ಮನ್ನು ಸರ್ಕಾರಿ ಪ್ರೌಢ ಶಾಲೆ ಬೆಳಗಾವಿ ಇಲ್ಲಿ ಒದುತ್ತಿರುವ ವಿದ್ಯಾರ್ಥಿ ಮಾನ್ಯ/ಮನ್ವಿತ್ ಎಂದು ಭಾವಿಸಿಕೊಂಡು ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ವ್ಯವಸ್ಥಾಕರಿಗೆ ಪ್ರದರ್ಶನದ ವೇಳೆಯನ್ನು ತಿಳಿಸುವಂತೆ ಕೋರಿ ಒಂದು ಪತ್ರವನ್ನು ಬರೆಯಿರಿ,

***ಅಥವಾ***

ನಿಮ್ಮ ಶೈಕ್ಷಣಿಕ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಶಿವಮೊಗ್ಗದಲ್ಲಿರುವ ನಿಮ್ಮ ತಾಯಿಗೆ ಒಂದು ಪತ್ರವನ್ನು

ಬರೆಯಿರಿ.

**ಐ) ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಎರಡು ಪುಟಗಳಿಗೆ ಮಿರದಂತೆ ಪ್ರಬಂಧ ಬರೆಯಿರಿ**

೪೬. ಎ) ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ದಿಯಲ್ಲಿ ಮಾದ್ಯಮಗಳ ಪಾತ್ರ **1x5=5**

ಬಿ) ಅಕ್ಷರ ದಾಸೋಹ

Use E-Papers, Save Trees
Above line hide when print out